<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 227/2020 ಸಿಡಬ್ಲ್ಯೂ: 1 ಪಿಡಬ್ಲ್ಯೂ: 5

ಪ್ರಮಾಣವಚನ ಬೋಧಿಸಲಾಯಿತು ದಿಃ 13-05-2025

ಹೆಸರು : ಅನುಷಾರಾಣಿ

ಗಂಡ ಹೆಸರು : ರಾಮು

ವಯಸ್ಸು : 27 ವರ್ಷ

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ಮದಕಲ್ ಗ್ರಾಮ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 6 ನನ್ನ ತಾಯಿ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ನನಗೆ ಗೊತ್ತು. 1 ನೇ ಆರೋಪಿತನು ನನ್ನ ಗಂಡ , 2 ನೇ ಆರೋಪಿತಳು ನನ್ನ ಮಾವ , 3 ನೇ ಆರೋಪಿತಳು ನನ್ನ ಅತ್ತೆ. 4 ಮತ್ತು 5 ನೇ ಆರೋಪಿತನು ನನ್ನ ಭಾವ.

ನನ್ನ ಮತ್ತು 1ನೇ ಆರೋಪಿತರ ಮದುವೆ ದಿ. 28-07-2016 ರಂದು ಸೇಡಂ ನಲ್ಲಿ ಆಗಿದ್ದು ಇರುತ್ತದೆ. ಮದುವೆಯಾದ ನಂತರ ನಾನು ಮತ್ತು ನನ್ನ ಗಂಡ ಮತ್ತು ಎಲ್ಲಾ ಆರೋಪಿತರು ಮದ್ದೂರು ಗ್ರಾಮದಲ್ಲಿ ಒಟ್ಟಿಗೆ ಇದ್ದೆವು. ನಾನು ಮತ್ತು 1 ನೇ ಆರೋಪಿತನು 2 ವರ್ಷ ಗಳ ಕಾಲ ಜೊತೆಗಿದ್ದೆವು. ಅದರಲ್ಲಿ ಒಂದು ವರ್ಷಗಳ ಕಾಲ ಮಾತ್ರ ನನಗೆ ಚೆನ್ನಾಗಿ ನೋಡಿಕೊಂಡಿದ್ದು ಮತ್ತು ಇನ್ನೊಂದು ವರ್ಷಗಳ ಕಾಲ ಕಿರುಕುಳ ನೀಡಿರುತ್ತಾರೆ. 2,4,5ನೇ ಆರೋಪಿತರು ಎಲ್ಲಾರು ನನಗೆ ನನ್ನ ತಾಯಿಯ ಕಡೆಯಿಂದ ಒಂದು ಲಕ್ಷ ರೂ. ನಗದು ಹಣ ಹಾಗೂ 5 ತೊಲೆ ಹಣ ತಗೆದುಕೊಂಡು ಬಾ ಎಂದು ಹೆಳಿದರು. ಒಂದು ವೇಳೆ ತೆಗೆದುಕೊಂ ಡು ಬಂದಿಲ್ಲ ಬಂದಿಲ್ಲ ಎಂದರೆ ನಾನು ನಿನನಗೆ ಸಾಯಿಸುತ್ತೇನೆ ಅಥವಾ ಬೇರೆ ಮದುವೆ ಮಾಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಅದೇ ರೀತಿ 2 ನೇ ಆರೋಪಿತನು ನನಗೆ ಮಕ್ಕಳಾಗಲ್ಲ ನನ್ನ ಜೊತೆಗೆ ಬಾ ಅಂತಾ ನನಗೆ ಕಿರುಕುಳ ನೀಡುತ್ತಿದ್ದನು. ಆಗ ನಾನು ಈ ವಿಷಯವನ್ನು ಚಾ ಸಾ 6 ರವರಿಗೆ ತಿಳಿಸಿದ್ದು ಇರುತ್ತದೆ. ಆಗ ನಮ್ಮ ತಾಯಿ ಕೂಡಲೇ ಬಂದು ಅಲ್ಲಿಂದ ಮದಕಲ್ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು. ನಂತರ ನಮ್ಮ ತಾಯಿಯವರು ಪಂಚಾಯಿತಿ ಮಾಡಿ ಆರೋಪಿತರು ನನಗೆ ಅಲ್ಲಿಂದ ಕರೆದುಕೊಂಡು ಹೊದರು. ನಂತರ ಪುನಃ ಅದೇ ರೀತಿ ಆರೋಪಿತರು ನನಗೆ ರಂಡಿ ಬೋಸಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

ಸನ್ 2019 ರಲ್ಲಿ ಆರೋಪಿತರು ನನಗೆ ಕರೆದುಕೊಂಡು ಹೋಗಲು ನಮ್ಮಾರಿಗೆ ರಾತ್ರಿ 02-00 ಗಂಟೆಗೆ ಬಂದು ಸ್ಟಾಂಪ್ ಬರೆದುಕೊಂಡು ನಿಮ್ಮ ಹುಡುಗಿ ಸತ್ತರೆ ನಮ್ಮ ಜವಾಬ್ದಾರಿ ಅಲ್ಲ ಎಂದು ಹೇಳಿ ನನಗೆ ಮತ್ತು ಚಾ ಸಾ 6 ಮತ್ತು 11 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ. ಈ ಬಗ್ಗೆ ನಾನು ಪೋಲೀಸರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗೆ ನಿ ಪಿ 4 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ಆರೋಪಿತರೆಲ್ಲಾರು ನನಗೆ ಅಡುಗೆ ಮಾಡಲು ಬರುವುದಿಲ್ಲ ಹಾಗೂ ನಾನು ನೋಡಲು ಸರಿಯಾಗಿಲ್ಲ ಅಂತಾ ಕಿರುಕುಳ ನೀಡುತ್ತಿದ್ದರು ಎಂದರೆ ಸರಿ . ಅದೇ ರೀತಿ ನಿನಗೆ ಮಕ್ಕಳು ಆಗುವುದಿಲ್ಲ ಅಂತಾ ಮಾನಸಿಕವಾಗಿ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದರೆ ಸರಿ. ದಿ. 25-01-2018 ರಂದು ಅನನ್ಯ ಎಂಬ ಹೆಣ್ಣು ಮಗಳಿಗೆ ಜನ್ಮ ನೀಡಿದ್ದು ನಂತರ 5 ತಿಂಗಳು ಆದ ಮೇಲೆ ಗಂಡನ ಮನೆಗೆ ಹೋದಾಗ 1ನೇ ಆರೋಪಿತನು ಈ ಮಗು ನನಗೆ ಹುಟ್ಟಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಕಿರುಕುಳ ನೀಡಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿ. 26-02-2019 ರಂದು ಆರೋಪಿತರು ಎಲ್ಲಾರು ಹೇ ರಂಡಿ ಅನಾಮತ್ತು ಬಂಗಾರ ತೆಗೆದುಕೊಂಡು ಬಂದರೆ ಮಾತ್ರ ಮನೆಯ ಒಳಗಡೆ ಕಾಲು ಇಡಬೇಕು ಇಲ್ಲಎಂದರೆ ಕಾಲಿಡಲು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ ಎಂದರೆ ಸರಿ. ಹಾಗೂ ನನಗೆ ಬೈದು ತವರು ಮನೆಗೆ ಕಳುಹಿಸಿದರು ಎಂದರೆ ಸರಿ. ಅದೇ ರೀತಿ ದಿ.01-05-2019 ರಂದು ಆರೋಪಿತರು ಎಲ್ಲಾರು ಚಾ ಸಾ 6 ರವರ ಮನೆಗೆ ಬಂದು ಹೇ ರಂಡಿ ನಿನನಗೆ ಏನು ಹೇಳಿ ಕಳಿಸಿದ್ದೀವಿ ನೀನು ಏಕೆ ಹಣ ಮತ್ತು ಬಂಗಾರ ತರಲಿಲ್ಲ ಎಂದು ಅವಾಚ್ಯವಾಗಿ ಬೈದು ನನಗೆ ಕೈಯಿಂದ ಹೋಡೆ ಬಡೆ ಮಾಡಿದರು ಎಂದರೆ ಸರಿ. ಆಗ ಚಾ ಸಾ 6 ಮತ್ತು 11 ರವರಿಗೂ ಸಹ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಅಲ್ಲಿಂದ ಜಗಳ ಬಿಟ್ಟು ಹೋಗುತ್ತಿರುವಾಗ ಹಣ ಮತ್ತು ಬಂಗಾರ ತೆಗೆದುಕೊಂಡು ಬರಲಿಲ್ಲ ಎಂದು ಜೀವ ಸಹಿತ ಬಿಡುವುದಿಲ್ಲಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ವಕೀಲರಿಂದ: ಈ ಹಂತದಲ್ಲಿ ಆರೋಪಿತರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**